Rega No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

28—4—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಥಾಂಟ್‌ರಿಂದ ಕಾಶ್ಮೀರದ ಬಗೆ ಮದಸಿಕೆ ಇಲ್ಲ

ಗಂಧವೆಣ್ಣೆ ಉತ್ಪಾದನೆ

ಭಾರತವು ಪ್ರತಿವರ್ಷ 160 ಮೆಟ್ರಿಕ್ ಟನ್‌ಗಳಷ್ಟು ಗಂಧದೆಣ್ಣೆಯನ್ನು ಉತ್ಪಾದಿಸುತ್ತಿದೆ. ಅದರಲ್ಲಿ ಮೂರನೆಯ ಎರಡು ಭಾಗದಷ್ಟು ಎಣ್ಣೆಯು ವಿದೇಶಗಳಿಗೆ ರಫ್ತಾಗುತ್ತದೆ

ವಿಧಾನ ಸಭೆ ಅಧಿವೇಶನ

ಅಧಿವೇಶನದ ನಾಲ್ಕು ದಿವಸಗಳಲ್ಲಿ ಸರಕಾರದ ಕಾರ್ಯಕಲಾಪಗಳನ್ನು ಮಾತ್ರ ಮೇಜಿರಿಂದ ಬೆಂಗಳೂರಿನಲ್ಲಿ ಸರ್ವಾನೇಶವಾಗುವ ವಿಧಾನ ಸಭೆ ನಡೆಸುವುದು.

ಸ್ಥಾಪನೆ ಸಂಭವವಿಲ್ಲ

ಚಿತ್ರದುರ್ಗದ ಇಂಗಲಾಧಾಯ ಹತ್ತಿರ ಸಲ್ಫ್ಯೂರಿಕ್ ಆಸಿಡ್ ಉತ್ಪಾದನೆ ಕಾರ್ಖಾನೆ ಸ್ಥಾಪಿಸಲು ಹಿಂದೆ ಸೂಚಿತವಾಗಿದ್ದುದ್ದು ಈಗ ಸ್ಥಾಪಿತವಾಗುವ ಸಂಭವವಿಲ್ಲ.

ವಿಶೇಷ ಅಧಿವೇಶನ

ಕರ್ನಾಟಕ ಪ್ರಾಂತ ಪ್ರಜಾ ಸೋಷಲಿಸ್ಟ್ ಪಕ್ಷದ ವಿಶೇಷ ಅಧಿವೇಶನ ಮುಂದಿನ ಮಾಹೆ 16–17 ರಲ್ಲಿ ತುಮಕೂರಿನಲ್ಲಿ ಸರ್ವಾವೇಶವಾಗುವದು ಭಾರತ ಪ್ರಜಾ ಸೋಷಲಿಸ್ಟ್ ಪಕ್ಷದ ಜಂಟಿ ಕಾರ್ಯದರ್ಶಿ ಶ್ರೀ ಪ್ರೇಂ ಬಾಸಿಲ್ ಆಗಮಿಸುವರು.

ನಿಶೇಧ

ಮುಷ್ಟಿಯು ಕೆಲವಾಗಳಿಗೆ ಈ ವೈ ತ್ ಮುಕ್ತ ಮಿತ್ರತರ ಪರ್ಷಿಯಾ ಕೊಲ್ಲಿ ಪ್ರದೇಶಗಳಿಗೆ ಭಾರತದ ಮಹಿಳೆಯರು ಪ್ರಯಾಣ ಮಾಡುವದನ್ನು ಭಾರತ ಸರ್ಕಾರ ನಿಶೇಧಿಸಿದೆ.

★

ಮೈಸೂರಿನ ಪ್ರತಿಯೊಂದು ಜಿಲ್ಲೆ ತಾಲ್ಲೂಕು ಮಟ್ಟದಲ್ಲಿ ಅಂತ್ಯದೊಳಗೆ ಎಷ್ಟೆಷ್ಟು ಕೈಗಾರಿಕಾ ಎಸ್ಟೇಟುಗಳಿರುವದಾಗಿ ಬೆಂಗಳೂರು ವರದಿಯಾಯು ತಿಳಿಸುತ್ತದೆ.

ಯುವಕನ ಕೊಲೆ

ಹಬ್ಬಾನಿ ಗ್ರಾಮದ 28 ವರ್ಷದ ನಾರಾಯಣಪ್ಪ ಎಂಬವನನ್ನು ಈ ತಿಂಗಳು 3 ನೆಯ ತಾ|| ಕುದಿಯುತ್ತಿದ್ದ ಸಕ್ಕರೆ ಪಾಕದ ಕೊಪ್ಪರಿಗೆಗೆ ಹಾಕಲಾಯಿತೆಂದು ಅದರ ಫಲವಾಗಿ ಅವನು ಮರಣಹೊಂದಿದನೆಂದು ವರದಿಯಾಗಿದೆ. ಈ ಸಂಬಂಧದಲ್ಲಿ ಆರೋಪಿತನಾಗಿರುವ ವೆಂಕಟೇಶನ ತಂದೆಗೆ ಸೇರಿದ ನಾಲ್ಕು ಹೋತಗಳನ್ನು ವ್ಯಕ್ತನು ಕದ್ದಿದ್ದನೆಂದು ವರದಿಯಾಗಿದೆ.

ಭಾವಿಯಲ್ಲಿ ಮಹಿಳೆಯ ಶವ

ಕೋಲಾರಕ್ಕೆ 2 ಮೈಲಿಗಳ ದೂರದಲ್ಲಿರುವ ಬಿಂಬಾಡಮ್ಮನಹಳ್ಳಿಯ ವೀರಭದ್ರಾಚಾರಿ ಎಂಬವನ ಪತ್ನಿ 40 ವಯಸ್ಸಿನ ಲಕ್ಷ್ಮಮ್ಮ ಎಂಬವಳ ಶವ ಗ್ರಾಮದ ಬಳಿಯ ಭಾವಿಯಲ್ಲಿ ದೊರೆತಿದೆ. ವೀರಭದ್ರಾಚಾರಿ ಅನುಕೂಲಸ್ಥನೆಂಬುದಾಗಿ ಗೊತ್ತಾಗಿದೆ. ಮಕ್ಕಳಿಲ್ಲದ ಕಾರಣ ಎರಡನೆ ಮದುವೆಯನ್ನು ಕೆಲವು ವರ್ಷಗಳ ಕೆಳಗೆ ಆದನೆಂದು ಗೊತ್ತಾಗಿದೆ ಇತ್ತೀಚಿನ ತಿಂಗಳುಗಳಲ್ಲಿ ತನ್ನ ಮೊದಲನೆಯ ಪತ್ನಿ ಲಕ್ಷ್ಮಮ್ಮನ ನಡತೆಯಲ್ಲಿ ಸಂಶಯ ಬಂದು ಅವಳಿಗೆ ಹೊಡೆದು ಮನೆಯವರೆಲ್ಲ ಮಲಗಿದ್ದಾಗ ತಾನು ಏಷ್ಟವಾನ ಮಾಡಿದನು. ಮನೆಯವರು ಅವನನ್ನು ಆಸ್ಪತ್ರೆಗೆ ಸೇರಿಸಿದರು ಈ ಪಧ್ಯೆ ಲಕ್ಷ್ಮಮ್ಮ ಭಾವಿಗೆ ಬಿದ್ದಳು.

ಶಾಲೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಕ್ಷೇತ್ರ ಜೋಯಿಸರಿಂದ
29 ದಕಪಿ ಧನಿಷ್ಠ

★

ಅಣು ಪ್ರಯೋಗದ ವಿಂದ್ಯ ಲಂಡನ್ನಿನ ಅಮೆರಿಕ ರಾಯಭಾರಿ ಕಚೇರಿಯ ಮುಂದೆ ಕುಳಿತು ಸ್ಥಳ ಬಿಡಲು ನಿರಾಕರಿಸಿದ 350 ಜನರನ್ನು ಪೋಲೀಸರು ಬಂಧಿಸಿದರು.

ಕಾಶ್ಮೀರಕಲಹದಲ್ಲಿ ವಿಶ್ವಸಂಸ್ಥೆಯ ಹಂಗಾಮಿ ಪ್ರಧಾನ ಕಾರ್ಯದರ್ಶಿಯು ಥಾಂಟ್‌ರು ಪುಧ್ಯಸ್ಥಿಕೆ ವಹಿಸಬೇಕೆಂಬ ಸೂಚನೆ ಬಂದಿಲ್ಲವೆಂದು ನಿನ್ನೆ ನ್ಯೂಯಾರ್ಕ್‌ಗೆ ಹೋಗುವ ಸಂದರ್ಭದಲ್ಲಿ ದೆಹಲಿಯಪತ್ರಿಕೆಯವರಿಗೆ ರಕ್ಷಣಾ ಮಂತ್ರಿ ಶ್ರೀ ವಿ. ಕೆ ಕೃಷ್ಣಮೆನನ್‌ರು ತಿಳಿಸಿದರು.

ಕಾಶ್ಮೀರ ಬಗ್ಗೆ ಹೊಸ ಸೂಚನೆ

ವಿಶ್ವಭದ ತಾ ಮಂಡಲಿಯಲ್ಲಿ ಚರ್ಚೆ ಆರಂಭವಾದಾಗ, ಕಾಶ್ಮೀರದಲ್ಲಿ ಮತ ಸಂಗ್ರಹ ನಡೆಯಬೇಕೆಂದು ಇಲ್ಲವೇ ಇನ್ನಾವುದೇ ವಿಧದ ಸ್ವಯಂನಿರ್ಣಯಾತ್ಮಕ ರೀತಿಯನ್ನು ಒತ್ತಾಯ ಮಾಡುವದಿಲ್ಲವೆಂದು ನ್ಯೂಯಾರ್ಕ್ ಟೈಂಸ್ ಒತ್ತಾಯಪಡಿಸಿದೆ ಯುದ್ಧಸ್ಥಂಭನ ಗೆರೆ ಪಾಕಿಸ್ತಾನದ ಮನಸ್ಸಿನಲ್ಲಿ ಇಲ್ಲವೆಂದು, ಕಾಶ್ಮೀರದ ವಿಭಜನೆ ಶಾಶ್ವತಕ್ಕೆ ಬೇಕೆಂದೂ, ಭಾರತವು ಮತ್ತಷ್ಟು ಉಡಕ ಪ್ರದೇಶ ಹೊಂದಬೇಕೆಂದು, ಪಾಕಿಸ್ತಾನಕ್ಕೆ ಕಾಶ್ಮೀರ ಕಣಿವೆಯನ್ನು ಕಾಣಿಕೆ ಕೊಡಬೇಕೆಂದು, ಇದೇ ಬೇರೆ ವಿಧದ ಅಂಗೀಕಾರ ಅರ್ಹ ಸ್ವಯಂನಿರ್ಣಯಾತ್ಮಕ ರೀತಿಯಂದು ವರದಿಯಾಗಿದೆ

ಪ್ರಸಾದ್‌ರಿಗೆ ಭಾರತ ರತ್ನ

ಮೇ 13 ನೆಯ ತಾ|| ಹೊಸ ಅಧ್ಯಕ್ಷರು ಅಧಿಕಾರ ಸ್ವೀಕಾರ ಮಾಡಿದೊಡನೆಯೇ ಮಾಡುವ ಮೊದಲನೆ ಕೆಲಸವೆಂದರೆ ಡಾ|| ರಾಜೇಂದ್ರ ಪ್ರಸಾದರನ್ನು ಭಾರತ ರತ್ನ ಪುರಸ್ಕಾರದ ಪದಕದಿಂದ ಅಲಂಕರಿಸುವುದು ಎಂದು ದೆಹಲಿ ವಾರ್ತೆ-

× ವಿಧಿಸುವ ತೆರಿಗೆಗಳ ಪರಿಶೀಲನೆ ಆಗುವದಾಗಿ ಶ್ರೀ ಮೊರಾರ್ಜಿ ತಿಳಿಸಿದ್ದಾರೆ

ವಿಶ್ವಸಂಸ್ಥೆಗೆ ಹಕ್ಕಿಲ್ಲ

ಮಹಾರಾಷ್ಟ್ರ ದಂತೆಯೇ ಭಾರತದ ಒಂದು ಭಾಗವಾಗಿರುವ ಕಾಶ್ಮೀರ ಬಗ್ಗೆ ಚರ್ಚಿಸುವುದಕ್ಕೆ ವಿಶ್ವಸಂಸ್ಥೆಗೆ ಹಕ್ಕಿಲ್ಲವೆಂದು ರಕ್ಷಣಾ ಮಂತ್ರಿ ಶ್ರೀ ವಿ ಕೆ. ಕೃಷ್ಣಮೆನನ್‌ರು ನ್ಯೂಯಾರ್ಕ್‌ಗೆ ತೆರಳುವ ಮುನ್ನ ನಿನ್ನೆ ಬೊಂಬಾಯಿನಲ್ಲಿ ತಿಳಿಸಿದರು ಕಾಶ್ಮೀರದ ಮೇಲೆ ಭಾರತದ ಸಾರ್ವಾಧಿಕಾರ ಚರ್ಚಿಸಲು ವಿಶ್ವಸಂಸ್ಥೆಗೆ ಹಕ್ಕಿಲ್ಲ ಎಂದರು.

ಗುರುತಿನ ಚೀಟಿ

ಸಿಂಹಳದ ರಾಷ್ಟ್ರೀಯರಲ್ಲದವರಿಗೆ ಗುರುತಿನ ಚೀಟಿಕೊಡುವ ಮಸೂದೆ ಸಿಂಹಳ ಪಾರ್ಲಿಮೆಂಟಿನಲ್ಲಿ ನಿನ್ನೆ ಮಂಡಿತವಾಯಿತೆಂದು ಕೊಲಂಬೊ ವಾರ್ತೆ

ಸಿಮೆಂಟ್ ಉತ್ಪಾದನೆ

ಮೂರನೆಯ ಯೋಜನೆಯಲ್ಲಿ 15 ಮಿಲಿಯ ಟನ್‌ಗಳ ಸಿಮೆಂಟು ಉತ್ಪಾದನೆಯ ಪರಮಾವಧಿಯನ್ನು ಯೋಜನಾ ಸವಿತಿಯೊಂದಿಗೆ ಮಾತುಕತೆ ನಡೆಸಿ ಪುನರ್ವಿಮರ್ಶೆ ಮಾಡುವದಾಗಿ ನವ ದೆಹಲಿಯಲ್ಲಿ ನಿನ್ನೆ ಉಕ್ಕಿನ ಇಲಾಖೆಯ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ತಿಳಿಸಿದರು.

ಅಣು ಪ್ರಯೋಗ

ರಷ್ಯ ಅಣು ಪ್ರಯೋಗ ಆರಂಭಿಸುವದಾಗಿ ವಾಷಿಂಗ್ಟ್ ವಾರ್ತೆ

× ಕಾಶ್ಮೀರ ಪದಚ್ಯುತ ಇರಿಯಾಪತ್ ಡಾ|| ಶಂಕರಸಿಂಗರು ಕಿರೀಟಧಾರಣೆ ವಿಚಾರ ಕೈಬಿಟ್ಟಿರು.

× ಲಕ್ನೊ ವಿಶ್ವವಿದ್ಯಾನಿಲಯ ಪ್ರಶ್ನೆ ಪತ್ರಿಕೆಗಳ ಒಕ್ಕೂಟದ ಹಿನ್ನೆಲೆಯಲ್ಲಿ ಭಾರಿ ಪಿತೂರಿ ಇದೆ

ಪೌರಸಭಾ ಮತದಾರರ ಪಟ್ಟಿ

ಒರುವ ಜುಲೈ 1 ರಿಂದ ಪುನರ್ರಚಿತವಾಗಲಿರುವ ಮೈಸೂರು ನಗರ ಪೌರಸಭೆಗೆ ಸದಸ್ಯರುಗಳನ್ನು ಚುನಾಯಿಸಲು ತಯಾರಿಸಿರುವ ಮತದಾರರ ಪಟ್ಟಿಯನ್ನು ನಗರದ ಒಂಬತ್ತು ವಿಭಜನೆಗಳ ಒಂದೊಂದು ಸ್ಥಳಗಳಲ್ಲಿಯೂ, ಪುರಸಭಾ ಕಛೇರಿಯಲ್ಲಿಯೂ ಪ್ರಕಟಿಸಲಾಗಿದೆ ; ಈ ಪಟ್ಟಿಯಲ್ಲಿ ಆಗಬೇಕಾದ ತಿದ್ದುಪಡಿಗಳಿದ್ದಲ್ಲಿ ಸಂಬಂಧಿಸಿದ ಜನರು ಮೇ 9 ಬುಧವಾರ ಮಧ್ಯಾಹ್ನ 3 ಗಂಟೆಯೊಳಗೆ ಲಿಖಿತ ಮೂಲಕ ರಿಟರ್ನಿಂಗ್ ಆಫೀಸರ್ (ಮುನಿಸಿಪಲ್ ಕಮಿಷನರ್) ರವರಿಗೆ ತಿಳಿಸತಕ್ಕದ್ದು.

ಗೋರಿಗುಡ್ಡೆ ಸ್ತ್ರೀ ಹಲ್ಲೆ ಪ್ರಕರಣ

ಮಂಗಳೂರು ನಗರದ ಗೋರಿಗುಡ್ಡೆಯಲ್ಲಿ ಇತ್ತೀಚೆಗೆ ಓರ್ವ ಸ್ತ್ರೀ ಮೇಲೆ ಏಳೆಂಟು ಮಂದಿ ಅಕ್ಷಮ್ಯಮಾನುಷ ರೀತಿಯಲ್ಲಿ ಹಲ್ಲೆ ನಡೆಸಿದ ಸಂಬಂಧವಾಗಿ ಪ್ರಕರಣವನ್ನು ಅಡಗಿಸಲು ಪ್ರಯತ್ನಿಸಿದರೆಂಬ ಆರೋಪದ ಮೇಲೆ ಪಾಂಡೇಶ್ವರ ಸ್ಟೇಷನಿನ ಅಗಿನ ಪೋಲೀಸು ಸಬ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಎಲ್ ಡಿಸೋಜ, ಶಂಕನಾಡಿ ಸ್ಟೇಷನ್ನಿನ ಇಬ್ಬರು ಕಾನಸ್ಟೆಬಲರು, ಪಾಂಡವೇಶ್ವರ ಸ್ಟೇಷನ್ನಿನ ಇಬ್ಬರು ಕಾನಸ್ಟೆಬಲರು, ಹೀಗೆ ಐದು ಮಂದಿಯನ್ನು ಸಸ್ಪೆಂಡು ಮಾಡಲಾಗಿದೆ ಎಂದು ತಿಳಿದುಬಂದಿದೆ.

ನೂತನ ಸಂಶೋಧನೆ

ಹಾಸೊವರ (ಡಾಡ್)— ಹಾಸೋವರಿಗೆ ಸವಿಾಪದಲ್ಲಿರುವ ವೂರ್ಸೀ ಎಂಬಲ್ಲಿನ ಸಂಶೋಧನಾಗಾರದಲ್ಲಿ ಪಶುಸಂವರ್ಧನಾ ಸಂಶೋಧನೆಗಳು ನಡೆಯುತ್ತಿವೆ, ಬೀಜದ ಹೋರಿಗಳ ದೇಹವಲ್ಲಿರುವ ಕೊಬ್ಬಿನ ಹಾಗೂ ಮಾಂಸದ ಪ್ರಮಾಣವನ್ನು ಕಂಡುಹಿಡಿಯುವ ವಿಧಾನವನ್ನು ಹುಡುಕಲಾಗುತ್ತಿದೆ ; ಸಾಧನೆ ಯಲ್ಲಿ ಹೆಚ್ಚು ಯಶಸ್ಸನ್ನು ಕಾಣಬೇಕಾದರೆ ಐದು ಲಕ್ಷ ಪೌಂಡ್ ಹೆಚ್ಚಿನ ಹಣ ಬೇಕಾಗಿದೆ ಎಂದು ಹೇಳಲಾಗಿದೆ. ಸಾಧನೆ ಯಲ್ಲಿ ಹೆಚ್ಚು ಯಶಸ್ಸನ್ನು ಕಾಣಬೇಕಾದರೆ ಐದು ಲಕ್ಷ ಪೌಂಡ್ ವೆಚ್ಚದ ಯೋಜನೆಯೊಂದನ್ನು ಪೂರ್ಣಗೊಳಿಸಬೇಕಾಗುವುದು — ಸಂಶೋಧನೆ ಫಲವಾಗಿ, ಸ್ಥೂಲಕಾಯರಾದ ಮನುಷ್ಯರಿಗೂ, ಕೊಬ್ಬಿದ ಪ್ರಾಣಿಗಳಿಗೂ ಅಲ್ಪ ಭಸ್ಮದಿಂದಾಗುವ ಅಘಾತವು ಕಡಮೆಯೆಂದು ಹೇಳಲಾಗಿದೆ.

ವುಡ್‌ಲಾಂಡ್ಸ್ ಆತ್ಯಮೋಘ 12 ನೇ ವಾರ

ಒಂದು ಲಕ್ಷಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸುವ ಅತ್ಯಮೋಘ ಚಿತ್ರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜನಭರಿತ 2 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]

For Quality Printing ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

L. N. Press ಆ ಶೋ ಕಾ ಫಾರ್ಮಸಿ

Sivarampet, Mysore ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

Edited, Printed & Published by the Proprietor, Dharmacharya Nivata M. S. Krishna Rao. at the Satyavadi Press Chamarajapuram, Mysore 4.

ರಾಮಣ್ಣ ಒಂದು ಮನೆ ಕಟ್ಟಿಸಿದ
"ನೀವು ಕೇಳಿರುವಿರಾ ? ರಾಮಣ್ಣ ಒಂದು ಮನೆಯನ್ನು ಕಟ್ಟಿಸುತ್ತಿದ್ದಾನೆ."
ಈ ರಾಮಣ್ಣನ ಕೆಲಸ ಹಂಚುಗಳ ಮಾಡಿನ ಇಟ್ಟಗೆಯ ಮನೆ ಪೂರ್ಣವಾದಾಗ ಗ್ರಾಮಸ್ಥರೆಲ್ಲರೂ ಕೌತುಕಗೊಂಡರು.
"ಅದಕ್ಕೆ ರೂ. 4000 ಖರ್ಚಾಯಿತು."
"ಹುಚ್ಚು ಮಾತು. ಅವನಿಗಷ್ಟು ಹಣ ಎಲ್ಲಿಂದ ದೊರೆಯಿತು ?
"ಅವನ ಜೀವ ವಿಮಾ ಪಾಲಿಸಿಯಿಂದ. ಅದರ ಅವಧಿ ಈ ವರ್ಷದಲ್ಲೇ ಆಯಿತು."
ವಿಷ್ಣು ಒಬ್ಬ ತರುಣ ಜೈತ.
"ಹೌದು. ಒಂದು ಜೀವ ವಿಮಾ ಪಾಲಿಸಿಯನ್ನು ಪಡೆದಲ್ಲಿ, ಕೆಲವೇ ವರ್ಷಗಳಲ್ಲಿ ನಿಮಗ ಒಂದು ದೊಡ್ಡ ಹಣದ ಗಂಟು ಜೊರೆಯುವುದು. ಪ್ರಿಮಿಯಮ್‌ಗಳನ್ನು ಸುಲಭ ಮತ್ತು ಅನುಕೂಲವಾದ ಕಂತುಗಳಲ್ಲಿ ಕೊಡಬಹುದು.
ರಾಮಣ್ಣನಂತೆ ತಾನೂ ಒಂದು ಮನೆಯನ್ನು ಕಟ್ಟಬೇಕೆಂದು ಅವನು ನಿರ್ಧರಿಸಿದ. ಇದಕ್ಕಾಗಿ ಅವನು ಒಬ್ಬ ಜೀವ ವಿಮಾ ಏಜಂಟನನ್ನು ಕಾಣಲು ಹೋದ.
ವಿಷ್ಣು ಒಂದು ಜೀವ ವಿಮಾ ಪಾಲಿಸಿಯನ್ನು ಪಡೆದಿರುತ್ತಾನೆ. ಕೆಲವೇ ವರ್ಷಗಳಲ್ಲಿ ಅವನೂ ರಾಮಣ್ಣನಂತೆ ಹಿಂದು ಕೆಂಪು ಹಂಚುಗಳ ಮಾಡಿನ ಇಟ್ಟಗೆಯ ಮನೆಯ ಒಡೆಯನಾಗುವನು.
ಜೀವ ವಿಮೆ
ಗಿಂತ ಶ್ರೇಷ್ಠ ಉಳಿತಾಯ ಮತ್ತೊಂದಿಲ್ಲ
ASP/LIC-85

SHAKTI

SUDHA

A Superb Tonic